ಮಂಗಳೂರು ವಿಶ್ವವಿದ್ಯಾಲಯದಲ್ಲಿ ಸಾಗರ ವಿಜ್ಞಾನ ಕೇಂದ್ರ ತೆರೆಯುವ ಯೋಜನೆ ಬಗ್ಗೆ

೨೧೬. ಶ್ರೀ ಬಿ. ಎ. ಉಮ್ಮರಬ್ಬ (ವಿಟ್ಲ).—ಮಾನ್ಯ ಶಿಕ್ಷಣ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಗಳೂರು ವಿಶ್ವವಿದ್ಯಾನಿಲಯ ಸ್ಥಾಪನೆಯಾದಾಗಿನಿಂದ ಇಲ್ಲಿಯವರೆಗೆ ರಾಜ್ಯ ಸರ್ಕಾರ ವೆಚ್ಚ ಮಾಡಿರುವ ಹಣವೆಷ್ಟು ?

ಆ) ಈ ವಿಶ್ವವಿದ್ಯಾಲಯಕ್ಕೆ ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗದವರು ನೀಡಿದ ಅನುದಾನ ಎಷ್ಟು ?

ಇ) ಸಾಗರ ವಿಜ್ಞಾನಕ್ಕೆ ಸಂಬಂಧಪಟ್ಟಂತೆ ವಿಶೇಷ ಅಧ್ಯಯನ ಕೇಂದ್ರ ತೆರೆಯುವ ಯೋಜನೆ ಸರ್ಕಾರದವರಲ್ಲಿದೆಯೇ ?

ಶ್ರೀ ಎಂ. ರಘುಪತಿ (ಮಾನ್ಯ ಶಿಕ್ಷಣ ಸಚಿವರು).—

ಅ) ರೂ. ೮,೦೭,೫೫,೧೫೮.೦೦

ಆ) ಇನ್ನು ಅವರು ಅನುದಾನ ನೀಡಿಲ್ಲ.

ಇ) ಇಲ್ಲ.

## ಕೃಷಿ ಭವನಕ್ಕೆ ಅನುದಾನ

೪೩೬. ಶ್ರೀ ಜಿ.ಎಸ್. ಆಚಾರ್ (ಬೈಂದೂರು).—ಮಾನ್ಯ ಕೃಷಿ ರಾಜ್ಯಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ರಾಜ್ಯದ ರೈತರ ಅನುಕೂಲಕ್ಕಾಗಿ ಬೆಂಗಳೂರಿನಲ್ಲಿ ಕರ್ನಾಟಕ ಪ್ರದೇಶ ಕೃಷಿಕ್ ಸಮಾಜದಿಂದ ರಚಿಸಲ್ಪಡುತ್ತಿರುವ ಕೃಷಿ ಭವನ ಕಟ್ಟಡದ ಕೆಲಸವನ್ನು ಪೂರ್ಣಗೊಳಿಸಲು ಸಾಕಷ್ಟು ಅನುದಾನ ನೀಡುವುದಾಗಿ ಹಿಂದೆ ನೀಡಿದ ವಾಗ್ದಾನದ ಬಗ್ಗೆ ಕೈಕೊಂಡ ಕ್ರಮವೇನು ?

ಶ್ರೀ ಬಿ. ಸೋಮಶೇಖರ (ಕೃಷಿ ರಾಜ್ಯ ಸಚಿವರು).—

ಕರ್ನಾಟಕ ಪ್ರದೇಶ ಕೃಷಿಕ್ ಸಮಾಜವು ತಾನು ಬೆಂಗಳೂರಿನಲ್ಲಿ ಕಟ್ಟುತ್ತಿರುವ ಕೃಷಿ ಭವನದ ಕಟ್ಟಡಕ್ಕಾಗಿ ಅನುದಾನವನ್ನು ಕೋರುತ್ತಲೇ ಇದೆ, ಕೃಷಿ ಇಲಾಖೆಯ ಮಿತ ಯೋಜನಾ ಹಂಚಿಕೆಯಿಂದ ಕೃಷಿಕ ಸಮಾಜದ ಈ ಕೋರಿಕೆಯನ್ನು ಈಡೇರಿಸಲಾಗಲಿಲ್ಲ. ಆದರೆ ಸರ್ಕಾರವು ಈಗಾಗಲೇ ನಗರದಲ್ಲಿ ನಿರ್ಮಿಸುತ್ತಿರುವ ಕೃಷಿ ಭವನದ ನಿರ್ಮಾಣಕ್ಕಾಗಿ ನಗರದ ಅತ್ಯಂತ ಬೆಲೆಬಾಳುವ ಸ್ಥಳದಲ್ಲಿ ೬೨೫೫ ಚ.ಅ. ವಿಸ್ತೀರ್ಣದ ನಿವೇಶನವನ್ನು ಉಚಿತ ಕೊಡುಗೆ (ಲೀಸ್)ಯಾಗಿ ನೀಡಿದೆ. ಕರ್ನಾಟಕ ಪ್ರದೇಶ ಕೃಷಿಕ್ ಸಮಾಜವು ಈಗ ಕಟ್ಟುತ್ತಿರುವ ಕೃಷಿ ಭವನದ ಕಟ್ಟಡದಲ್ಲಿ ವಾಣಿಜ್ಯ ಸಂಸ್ಥೆಗಳಿಗೆ ಬಾಡಿಗೆಗೆ ಸ್ಥಳವೊದಗಿಸುವುದರಿಂದಲೂ ಹಾಗೂ ಈ ಸಮಾಜದ ಹಣ್ಣು ಹಂಪಲು ಮಾರಾಟ ಸಹಕಾರ ಸಂಘ ಮತ್ತು ಸೈತ್ಯಾಗಾರದಿಂದ ಸಾಕಷ್ಟು ಆದಾಯ ದೊರೆಯುತ್ತಿದ್ದು ಇವುಗಳಿಂದ ಕೃಷಿ ಭವನದ ಕಟ್ಟಡವನ್ನು ಪೂರೈಸುವ ಸಾಮರ್ಥ್ಯವು ಕರ್ನಾಟಕ ಪ್ರದೇಶ ಕೃಷಿಕ್ ಸಮಾಜಕ್ಕಿದೆ ಎಂದು ಭಾವಿಸಲಾಗಿದೆ.

## ಹರಿಹರ ತಾಲ್ಲೂಕಿನಲ್ಲಿ ಸಣ್ಣ ಪ್ರಮಾಣದ ನೀರು ಸರಬರಾಜು ಯೋಜನೆ

೩೮೪. ಶ್ರೀ ಬಿ.ಜಿ. ಕೊಟ್ರಪ್ಪ (ಹರಿಹರ).—ಮಾನ್ಯ ಗ್ರಾಮಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಹರಿಹರ ತಾಲ್ಲೂಕಿನಲ್ಲಿ ಸಣ್ಣ ಪ್ರಮಾಣದ ನೀರು ಸರಬರಾಜು ಯೋಜನೆ ಪ್ರಕಾರ ೧೯೭೫ನೇ ಡಿಸೆಂಬರ್ ಅಂತ್ಯದವರೆಗೆ ತೆಗೆದುಕೊಂಡ ಯೋಜನೆಗಳೆಷ್ಟು?